**ಸಿ.ಸಿ. ನಂಬರ್ : 266/2019**

ಪಿ.ಡಬ್ಲ್ಯೂ : 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ :01.07.2023

**ಪಾಟೀ ಸವಾಲು : ಶ್ರೀ ಎಸ್.ಜೆ.ಹೆಚ್ ವಕೀಲರಿಂದ – ಆರೋಪಿಯ ಪರವಾಗಿ**

ಈ ಸಾಲದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಆರೋಪಿ ಸಾಲದ ಕರಾರು ಪತ್ರ ಮತ್ತು ಹಣ ಸಂದಾಯ ರಶೀದಿ ಬರೆದುಕೊಟ್ಟಿದ್ದಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಓದಿ ಸಹಿ ಮಾಡಿರುತ್ತೇನೆ. ಅದರಲ್ಲಿರುವ ವಿಚಾರ ನಾನೇ ಹೇಳಿ ಬರೆಯಿಸಿರುತ್ತೇನೆ. ಆರೋಪಿ ಮನೆಗೆ ಬಂದು ಹಣ ಕೇಳಿದ ಕಾರಣ ನಾನು ನಗದಾಗಿ ಹಣ ಕೊಟ್ಟಿದ್ದೇನೆ. ಆರೋಪಿಯು ನಾನು ಹಣ ಕೊಡುವ 20 ದಿನಗಳ ಮೊದಲೇ ಹಣ ಕೊಡುವಂತೆ ಕೇಳಿದ್ದರು. ಆರೋಪಿಗೆ ನಾನು 2 ಕಂತುಗಳಲ್ಲಿ ಹಣ ಕೊಟಿಟ್ಟು ಮೊದಲಿಗೆ 1,75,000/- ಮತ್ತು 2 ನೇ ಬಾರಿಗೆ 1,75,000/- ರೂಗಳನ್ನು ಕೊಟ್ಟಿರುತ್ತೇನೆ. ಸದರಿ ಹಣವನ್ನು 5 ತಿಂಗಳ ಅಂತರದಲ್ಲಿ ಕೊಟ್ಟಿರುತ್ತೇನೆ. ಆರೋಪಿಯು ವ್ಯವಹಾರದ ಉದ್ದೇಶಕ್ಕೆ ಸಾಲ ಕೇಳಿದ್ದರು ಏನು ವ್ಯವಹಾರ ಎಂದು ಹೇಳಿರಲಿಲ್ಲ. ನನ್ನ ತಂದೆಯಿಂದ ಬಂದ ಜಮೀನನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ಸದರಿ ಜಮೀನಿಂದ ಬಂದ ಆದಾಯದಲ್ಲಿ ನನ್ನ ಅಣ್ಣ ಯಾವುದೇ ಪಾಲನ್ನು ಪಡೆದುಕೊಳ್ಳುವುದಿಲ್ಲ. ನನ್ನ ಮತ್ತು ನನ್ನ ಅಣ್ಣನ ಮಧ್ಯೆ

ತಂಟೆ ತಕರಾರುಗಳು ಇರುವುದಿಲ್ಲ ಅನ್ಯೋನ್ಯವಾಗಿದ್ದೇವೆ. ನಾನು ಆರೋಪಿಗೆ ಹಣ ಕೊಡುವ ವಿಚಾರವನ್ನು ನನ್ನ ಅಣ್ಣನ ಗಮನಕ್ಕೆ ತಂದಿರಲಿಲ್ಲ. ಹಣ ಪಡೆದುಕೊಳ್ಳಲು ಆರೋಪಿ ಒಬ್ಬರೆ ಬಂದಿದ್ದರು. ಆರೋಪಿಗೆ ನೀಡಿದ ವಕೀಲರ ನೋಟೀಸ್ಸಿನ ಮಾಹಿತಿ ಆರೋಪಿಗೆ ತಲುಪಿತ್ತು ಎಂದು ಹೇಳಿದ್ದೇನೆ ಅಂದರೆ ಸರಿ. ನೋಟಿಸ್ಸಿನ ಮಾಹಿತಿ ಆರೋಪಿಗೆ ತಲುಪಿತ್ತು ಎನ್ನುವ ಬಗ್ಗೆ ಯಾವುದೇ ದಾಖಲಾತಿ ಕೊಟ್ಟಿರುವುದಿಲ್ಲ. ನಾನು ನನ್ನ ಅಣ್ಣನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನೋಟೀಸ್ಸಿನಲ್ಲಿ ತೋರಿಸಿರುವ ಆರೋಪಿಯ ವಿಳಾಸ ಸುಳ್ಳು ಅಂದರೆ ಸರಿಯಲ್ಲ. ಆರೋಪಿಯು ಸದರಿ ವಿಳಾಸದಲ್ಲಿ ವಾಸವಿರಲಿಲ್ಲ ಅಂದರೆ ಸರಿಯಲ್ಲ. ಆದುದರಿಂದ ನಾನು ಸಲ್ಲಿಸಿದ ತಿಳುವಳಿಕೆ ಪತ್ರ ಆರೋಪಿಗೆ ತಲುಪಿರುವುದಿಲ್ಲ ಅಂದರೆ ಸರಿಯಲ್ಲ. ದಿಃ 30.01.2015 ರಂದು ನನ್ನ ಅಣ್ಣ ಉಮೇಶ್ ಮತ್ತು ಧರಣೇಂದ್ರ ಕುಮಾರ್ ಸ್ವಾಮಿ ಎಂಬುವವರು ಆರೋಪಿಗೆ ಸಂಬಂಧಪಟ್ಟ ಮನೆ ಆಸ್ತಿಯ ಬಗ್ಗೆ ಆರೋಪಿಯ ಜೊತೆ ಕ್ರಯ ಕರಾರು ಪತ್ರ ಮಾಡಿಕೊಂಡಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಕರಾರು ಪತ್ರವನ್ನು ಉಮೇಶ್ ಮತ್ತು ಧರಣೇಂದ್ರ ಕುಮಾರ್ ರವರು ಆರೋಪಿಗೆ ಕೊಟ್ಟ ಸಾಲದ ಭದ್ರತೆಗೆ ಮಾಡಿಕೊಂಡಿದ್ದರು ಅಂದರೆ ನನಗೆ ಗೊತ್ತಿಲ್ಲ. ಈ ವಿಚಾರಗಳು ನನಗೆ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಯಾವುದೇ ಸಮಯದಲ್ಲಿ ನಮ್ಮ ಮನೆಗೆ ಬಂದಿರುವುದಿಲ್ಲ ನನ್ನ ಬಳಿ ಸಾಲ ಪಡೆದಿರುವುದಿಲ್ಲ

ಅಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಚೆಕ್ಕು ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ನಾನು ನನ್ನ ಅಣ್ಣ ಉಮೇಶ್ ರವರ ಮಾತು ಕೇಳಿ ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯಿಂದ ನನ್ನ ಅಣ್ಣ ಉಮೇಶ್ ರವರು ಪಡೆದ ಇನ್ನು 8-10 ಚೆಕ್ಕುಗಳು ನಮ್ಮ ಮನೆಯಲ್ಲಿ ಇದೆ ಅಂದರೆ ಸರಿಯಲ್ಲ. ಆದುದರಿಂದ ಆರೋಪಿಯು ನನಗೆ ಯಾವುದೇ ಹಣವನ್ನು ಕೊಡಲು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೋಮವಾರಪೇಟೆ.**